85

14-3-25

**ಶ್ರೀ. ಡಾ. ತಳವಾರ ಸಾಬಣ್ಣಾ, ಕರ್ನಾಟಕದ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ವಿಜಯಪುರ ಜಿಲ್ಲೆಯ ಜಲ ಜೀವನ್ ಮಿಷನ್ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿರುವ ಕುರಿತು ಕೇಳಿರುವ ಶೂನ್ಯ ವೇಳೆಯ ಪ್ರಶ್ನೆಗೆ ಉತ್ತರ:**

**ಪ್ರಶ್ನೆ:**

"ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸುವ ಕೇಂದ್ರ ಸರಕಾರದ ಮಹತ್ವಕಾಂಕ್ಷಿ ಜಲ ಜೀವನ ಮಿಷನ್ ಯೋಜನೆ ವಿಜಯಪುರ ಜಿಲ್ಲೆಯಲ್ಲಿ ಗುಣಮಟ್ಟದ ಕೊರತೆ, ಅಪೂರ್ಣ ಕಾಮಗಾರಿ, ಪೈಪ್‌ಗಳಲ್ಲಿ ನೀರು ಸೋರಿಕೆ ಮತ್ತು ಇತರೆ ಸಮಸ್ಯೆಗಳಿಂದ ಕಳಪೆಯಾಗಿದೆ ಎಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುವ ಬಗ್ಗೆ.

**ಹೇಳಿಕೆ:**

ಶ್ರೀ. ಡಾ. ತಳವಾರ ಸಾಬಣ್ಣಾ, ಕರ್ನಾಟಕದ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಉಲ್ಲೇಖಿಸಿರುವ ವಿಜಯ ಕರ್ನಾಟಕ ದಿನಪತ್ರಿಕೆಯು ಮಾರ್ಚ್ 02, 2025ರಂದು ಪ್ರಕಟಗೊಂಡಿರುತ್ತದೆ.

ರಾಜ್ಯದಲ್ಲಿ ಮನೆ ಮನೆಗೆ ನಲ್ಲಿ ಸಂಪರ್ಕ ಕಲ್ಪಿಸಿ ಶುದ್ಧ ಕುಡಿಯುವ ನೀರೊದಗಿಸುವ ಜಲ ಜೀವನ್ ಮಿಷನ್ ಯೋಜನೆಯು 15ನೇ ಆಗಸ್ಟ್ 2019ರಿಂದ ಜಾರಿಗೆ ಬಂದಿದ್ದು, ವಿಜಯಪುರ ಜಿಲ್ಲೆಯಲ್ಲಿ ಜಲಮೂಲದ ಸುಸ್ಥಿರತೆಯ ಅನುಸಾರ 04 ಹಂತಗಳಲ್ಲಿ ಒಟ್ಟಾರೆ 1067 ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಪರಿಗಣಿಸಲಾಗಿರುತ್ತದೆ. ಈ ಪೈಕಿ ಇವರೆಗೂ 1000 ಕಾಮಗಾರಿಗಳನ್ನು ಪ್ರಾರಂಭಿಸಿದ್ದು, 670 ಕಾಮಗಾರಿಗಳನ್ನು ಭೌತಿಕವಾಗಿ ಪೂರ್ಣಗೊಳಿಸಲಾಗಿದೆ ಹಾಗೂ 330 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಇವುಗಳಲ್ಲಿ ಇದುವರೆಗೆ ಒಟ್ಟು 94 ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗಿರುತ್ತದೆ.

ಈ ಕಾಮಗಾರಿಗಳನ್ನು ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸುವ ಪೂರ್ವದಲ್ಲಿ ಜಲ ಜೀವನ ಮಿಷನ್ ಮಾನದಂಡಗಳ ಅನುಸಾರ ಗ್ರಾಮಸ್ಥರ ಸಮ್ಮುಖದಲ್ಲಿ ಗ್ರಾಮ ಸಭೆಯನ್ನು ಆಯೋಜನೆ ಮಾಡಿ ಪ್ರತಿಯೊಂದು ಸೃಜನೆಗೊಂಡ ಆಸ್ತಿಯನ್ನು ಅಂದರೆ, ಪೈಪ್ ಲೈನ್, ನಳ ಸಂಪರ್ಕ ಹಾಗೂ ಅವುಗಳಲ್ಲಿ ಯಶಸ್ವಿ ನೀರಿನ ಹರಿವನ್ನು ಧೃಢೀಕರಿಸಿ, ನಂತರ ಆ ಗ್ರಾಮವನ್ನು "ಹರ್ ಘರ್ ಜಲ್"ಎಂದು ಘೋಷಿಸಲಾಗಿದೆ.

ಜಲ್ ಜೀವನ್ ಮಿಷನ್ ಯೋಜನೆಯನ್ನು ಜಿಲ್ಲಾ ಹಂತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಯೋಜನೆಯ ಮೇಲುಸ್ತುವಾರಿಯನ್ನು ವಹಿಸಿರುತ್ತಾರೆ. ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ 3ನೇ ವ್ಯಕ್ತಿ ತಪಾಸಣೆ (TPIA) ಸಂಸ್ಥೆಯನ್ನು ನಿಯೋಜಿಸಲಾಗಿದ್ದು, ರಾಜ್ಯಮಟ್ಟದಲ್ಲಿ ರಾಜ್ಯ ಗುಣಮಟ್ಟ ಸಮಾಲೋಚಕರು (SQM) ರವರನ್ನು ಹಾಗೂ ಕೇಂದ್ರ ಮಟ್ಟದಲ್ಲಿ National Wash Experts ಗಳನ್ನು ಕಾಲಕಾಲಕ್ಕೆ ನಿಯೋಜಿಸಿ ಕಾಮಗಾರಿಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅಳವಡಿಸಲಾಗುತ್ತಿರುವ HDPE ಕೊಳವೆಗಳ ಗುಣಮಟ್ಟವನ್ನು ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ CIPET ಸಂಸ್ಥೆಯಿಂದ ಕಡ್ಡಾಯವಾಗಿ ಪರಿಶೀಲಿಸಲಾಗುತ್ತಿದೆ.

ಅಲ್ಲದೇ, ಪ್ರಸ್ತುತ ರಾಜ್ಯಮಟ್ಟದಲ್ಲಿ ಒಟ್ಟಾರೆ ರಾಜ್ಯದ ಜೆಜೆಎಂ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲು 3ನೇ ವ್ಯಕ್ತಿ ತಪಾಸಣೆಯ ಸ್ವತಂತ್ರ ಸಂಸ್ಥೆಯಾದ M/s Bureau Veritas, ಚೆನ್ನೈ ಇವರಿಗೆ ವಹಿಸಲಾಗಿದ್ದು, ಈ ಸಂಸ್ಥೆಯು ಸಹ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸುತ್ತಿದ್ದು, ಶಿಫಾರಸ್ಸಿನಂತೆ ಕ್ರಮಕೈಗೊಂಡು ಕಾಮಗಾರಿಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗುತ್ತಿದೆ.

ಕೇಂದ್ರ ಸರ್ಕಾರದಿಂದ ನಡೆಸಲಾಗುತ್ತಿರುವ ಕ್ರಿಯಾತ್ಮಕತೆಯ ಮೌಲ್ಯಮಾಪನ (Functionality Assessment) ವರದಿಯನ್ವಯ ಹರ್ ಘರ್ ಜಲ್ ಎಂದು ಘೋಷಿಸಿರುವ ಗ್ರಾಮಗಳಲ್ಲಿ (ಶೇ.100 ರಷ್ಟು ನಳ ಸಂಪರ್ಕ ಒದಗಿಸಿರುವ) ನಳ ಸಂಪರ್ಕಗಳು ಕಾರ್ಯಾತ್ಮಕವಾಗಿರುವ ಬಗ್ಗೆ ಖಾತರಿಪಡಿಸಲು ಇಲಾಖೆಯ ಕಿರಿಯ / ಸಹಾಯಕ ಅಭಿಯಂತರರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಜಂಟಿ ಪರಿವೀಕ್ಷಣೆಯನ್ನು ನಡೆಸಿ, ದೃಢೀಕರಿಸಲಾಗುತ್ತಿದೆ.

ಹೀಗೆ ಈ ಕಾಮಗಾರಿಗಳನ್ನು ಮೇಲಿನ ಎಲ್ಲಾ ಮಾನದಂಡಗಳನ್ನು ಅನುಸರಣೆ ಮಾಡಿ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಕಾಂಕ್ರಿಟ್ ರಸ್ತೆಗಳನ್ನು ಮರು ಪೂರಣ (Restoration) ಕೈಗೊಳ್ಳಲಾಗುತ್ತಿದೆ.

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.